ಓಎಸ್. 165/2016
ಪಿಡಬ್ಲ್ಯೂ-1

ದಿನಾಂಕ 22.11.2024 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

<u>ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಿಂದಃ</u>-

ನಾನು ಇದ್ದಕ್ಕೂ ಮೊದಲು ಪ್ರತಿವಾದಿಗಳ ವಿರುದ್ದ ಅಸಲು ದಾವಾ ಸಂಖ್ಯೆ **23/2011** ನ್ನು ದಾಖಲಿಸಿದ್ದು, ಅದು ನನ್ನ ಪರವಾಗಿ ಡಿಕ್ರಿಯಾಗಿರುತ್ತದೆ ಎಂದರೆ ಸರಿ. ಸದರಿ ಡಿಕ್ರಿಯ ವಿರುದ್ದ ಪ್ರತಿವಾದಿಗಳು ಮೇಲ್ಮನವಿ ಸಲ್ಲಿಸಿದ್ದು, ಅದು ಪುರಸ್ಕೃತವಾಗಿರುತ್ತದೆ ಎಂದರೆ ಸರಿ. ಸದರಿ ತೀರ್ಪನ್ನು ನಾನು ಪ್ರಶ್ನಿಸಿರುವುದಿಲ್ಲ. ಅಸಲು ದಾವಾ ಸಂಖ್ಯೆ **23/2011** ರಲ್ಲಿ ನಾನು ದಾವಾಸ್ವತ್ತಿನ ಸ್ವಾಧೀನದಲ್ಲಿ ಇದ್ದ ಬಗ್ಗೆ ತಿಳಿಸಿರುತ್ತೇನೆ. ಸದರಿ ದಾವೆಯಲ್ಲಿ ಪ್ರತಿವಾದಿಗಳು ನನ್ನ ಅನುಮತಿಯ ಮೇರೆಗೆ ದಾವಾಸ್ವತ್ತಿನಲ್ಲಿ ವಾಸವಿರುವ ಬಗ್ಗೆ ತಿಳಿಸಿರುವುದಿಲ್ಲ ಎಂದರೆ ಸರಿಯಲ್ಲ.

ಈ ದಾವೆಯ ದಾವಾಸ್ವತ್ತು **1984** ರ ಮಹಜರ್ ಪತ್ರದ ಮೂಲಕ ನನ್ನ ತಂದೆಯ ಹಿಸ್ಸೆಗೆ ಬಂದಿರುತ್ತದೆ. ಸದರಿ ಮಹಜರ್ ಪತ್ರದ ಪ್ರಕಾರ ಹಾಲಿ ವಾಸವಿರುವ ಮನೆಯ ಬಲ ಭಾಗವು **5** ನೇ ಅಶೋಕ್ ಕುಮಾರನಿಗೂ ಮನೆಯ ಎಡಭಾಗವು **2** ನೇ ನಾಗಯ್ಯನಿಗೂ ಸೇರತಕ್ಕದ್ದು, ಅಡುಗೆ ಮನೆಯ ಭಾಗ **4** ನೇ ಚಂದ್ರಶೇಖರ್ ರವರಿಗೆ ಸೇರತಕ್ಕದ್ದು, ಮನೆಯ ಮುಂದುಗಡೆ ಇರುವ ಹೊರ ಮನೆಯು **3** ನೇ ಗೋಪಾಲಕೃಷ್ಣನಿಗೆ ಸೇರಿತಕ್ಕದ್ದು ಎಂದು ಬರೆಯಲಾಗಿದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಆ ರೀತಿಯ ಬರವಣಿಗೆಯನ್ನು ನೋಂದಾಯಿತ ವಿಭಾಗಪತ್ರದಲ್ಲಿ ನಮೂದಿಸಿರುವುದಿಲ್ಲ ಎಂದು ಉತ್ತರಿಸಿರುತ್ತಾರೆ. ಮೇಲೆ ಹೇಳಿದ ನಾಗಯ್ಯ ನನ್ನ ತಂದೆ. ಉಳಿದವರು ಈ ದಾವೆಯ ಪ್ರತಿವಾದಿಗಳು. ಮಹಜರ್ ಪ್ರಕಾರ ಹಳೆ ಮನೆಯು ನನ್ನ ತಂದೆ ಮತ್ತು ಅವರ ಸಹೋದರರಿಗೆ ಸೇರತಕ್ಕದ್ದು ಎಂದರೆ ಸರಿಯಲ್ಲ. ನಿ.ಪಿ **2** ರ ಪುಟ ಸಂಖ್ಯೆ **2** ರಲ್ಲಿ ನಾವುಗಳು ಈ ಆಸ್ತಿ ಪಾಸ್ತಿಗಳನ್ನು **1984** ನೇ ಇಸವಿಯಲ್ಲಿ ಪಾಲು

ಪಾರಿಕತ್ತು ಮಾಡಿಕೊಂಡು ಅನುಭವಿಸುತ್ತಾ ಇರುತ್ತೇವೆ ಎಂದು ಬರೆಯಲಾಗಿದೆ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿದಾರರ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸ ಇ

(ಸಾಕ್ಷಿದಾರರ ಸಹಿ) ಸಹಿ

ಹಿರಿಯ ಸಿವಿಲ್ ನ್ಯಾಯಾಧೀಶರು
ವಿರಾಜಪೇಟೆ.